## ಓಷನ್ ಸೈನ್ಸ್

ಐಪಾಡ್‌ನ ಈ ಆ್ಯಪ್ ಶೈಕ್ಷಣಿಕವಾಗಿ ಪ್ರಯೋಜನಕಾರಿ. ವಿವರಗಳು ಅಗಾಧವಾಗಿದ್ದು, ಮನಸೆಳೆಯುವ ಚಿತ್ರಗಳಿವೆ. ಮಧ್ಯೆ ಮಧ್ಯೆ ರಸಪ್ರಶ್ನೆಗಳಿದ್ದು, ಪರಾಮರ್ಶೆಗಳು ಪೂರಕವಾಗಿವೆ. ಸ್ಲೈಡ್‌ಶೋ, ವಿಡಿಯೋಗಳಿವೆ. ಕಡಲ ವಿಜ್ಞಾನದ ಏಳು ನಿಯಮಗಳ (ಒಂದೇ ಕಡಲು, ಭೂಮಿಯ ಹೊರಚಿಪ್ಪು, ಭೂಕಂಪ ಮೊದಲಾದವುಗಳನ್ನು ನಿಯಂತ್ರಿಸುವ ಸೂಪರ್ ಪವರ್... ಇತ್ಯಾದಿ) ಮೇಲೆ ಈ ಆ್ಯಪ್ ರೂಪಿಸಲಾಗಿದೆ. ಆ್ಯಪ್‌ನ ಹೋಂ ಪೇಜ್ ಕೆಳಗಡೆ ಬಟನ್ ಇದ್ದು, ಪ್ರತಿಯೊಂದು ನಿಯಮದ ಮುಖ್ಯ ಪುಟಕ್ಕೂ ಅನಿಮೇಶನ್ ಮೂಲಕ ವಿವರಣೆಯಿದೆ. ಉದಾಹರಣೆಗೆ ಹವಳದ ದಿಬ್ಬದ ಚಿತ್ರಣ ಅದ್ಭುತವಾಗಿದೆ. ಈ ಪುಟಗಳ ಕೆಳಗಡೆ ಇನ್ನೊಂದು ಬಟನ್ ಇದ್ದು 6 ಪುಟಗಳ ವಿವರ ತೆರೆದುಕೊಳ್ಳುತ್ತದೆ. ನಂತರ ಅದರ ಆಧಾರದ ಮೇಲೆ ಪ್ರಶ್ನೆಗಳನ್ನು ಕೊಡಲಾಗಿದೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಅನುಕೂಲ.




## ಟ್ಯೂನ್‌ಇನ್ ರೇಡಿಯೊ

ಜಗತ್ತಿನಲ್ಲೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಸುದ್ದಿ, ಕ್ರೀಡೆ, ಸಂಗೀತ ಹಾಗೂ ಚರ್ಚೆಗಳನ್ನು ಬಿತ್ತರಿಸುವ ರೇಡಿಯೊ ಕೇಂದ್ರಗಳನ್ನು ಹೊಂದಿರುವ ಆ್ಯಪ್ ಇದು. ಒಂದು ಲಕ್ಷಕ್ಕಿಂತ ಅಧಿಕ ಕೇಂದ್ರಗಳಿವೆ. ಜೊತೆಗೆ 40 ಲಕ್ಷದಷ್ಟು ಪಾಡ್‌ಕಾಸ್ಟ್‌ಗಳಿವೆ. ಆ್ಯಂಡ್ರಾಯ್ಡ್ ಫೋನ್ ಅಥವಾ ಟ್ಯಾಬ್ಲೆಟ್‌ಗೆ ಇದು ಉಚಿತ.




## ಮ್ಯಾಜಿಸ್ಟೊ ವಿಡಿಯೊ ಎಡಿಟರ್ ಆ್ಯಂಡ್ ಮೇಕರ್

ಇದು ನಿಮ್ಮ ವಿಡಿಯೊ ಕ್ಲಿಪ್ ಹಾಗೂ ಫೋಟೋಗಳನ್ನು ಎಡಿಟ್ ಮಾಡಿ ಸುಂದರವಾದ ಚಿತ್ರವನ್ನಾಗಿ ರೂಪಿಸುತ್ತದೆ. ನಿಮ್ಮ ಆಯ್ಕೆಯ ಸಂಗೀತ, ಗ್ರಾಫಿಕ್ ಅನ್ನು ಕೂಡಾ ಸೇರಿಸಬಹುದು. ಕನಿಷ್ಠ 5 ಫೋಟೋಗಳಿಂದಲೂ ಸಿನಿಮಾ ರೂಪಿಸುತ್ತದೆ. ಈ ಆ್ಯಪ್ ಸಂಪೂರ್ಣ ಉಚಿತ.




## ಪೊಕೆಟ್

ಲೇಖನಗಳು, ವಿಡಿಯೊ ಹಾಗೂ ಇತರ ವೆಬ್ ವಿವರಗಳನ್ನು ಸಂಗ್ರಹಿಸಿಡಲು ಲಕ್ಷಾಂತರ ಮಂದಿ ಈ ಆ್ಯಪ್ ಬಳಸುತ್ತಿದ್ದಾರೆ. ಈ ಸಂಗ್ರಹ ಒಂದೇ ಜಾಗದಲ್ಲಿದ್ದು ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ಎಲ್ಲೇ ಇದ್ದರೂ, ಆಫ್‌ಲೈನ್‌ನಲ್ಲಿ ಕೂಡಾ ವೀಕ್ಷಿಸಬಹುದು. ಲಿಂಕ್‌ಗಳನ್ನು ನಿಮಗೇ ಇ–ಮೇಲ್ ಮಾಡಿಕೊಳ್ಳುವುದು, ಬುಕ್‌ಮಾರ್ಕ್ ಇವೆಲ್ಲ ಕಿರಿಕಿರಿಯ ಕೆಲಸ. ಹೀಗಾಗಿ ಆನ್‌ಲೈನ್‌ನಲ್ಲಿ ಸಿಕ್ಕ ಲೇಖನಗಳು, ವರದಿ, ಚಿತ್ರಗಳು, ಬ್ಲಾಗ್ ಪೋಸ್ಟ್, ವಿಡಿಯೊ, ವೆಬ್ ಲಿಂಕ್ ಎಲ್ಲವನ್ನೂ ಪೊಕೆಟ್‌ಗೆ ಹಾಕಿ. ಬೇಕೆಂದಾಗ ತೆರೆದು ನೋಡಬಹುದು.




■ ಎಸ್. ತುಂಬೆ